**ದಿನಾಂಕಃ 29-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ</u>**

6. ನಾನು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಕೊಟ್ಟೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಹಾಯಕ ಅಭಿಯಂತರರು ಸ್ಥಳದ ನಕ್ಷೆ ತಯಾರಿಸಲು ಗುನ್ನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಕಚೇರಿಯಲ್ಲಿ ಕುಳಿತು ನನಗೆ ಹೇಗೆ ಬೇಕೋ ಹಾಗೆ ಗುನ್ನಾ ಸ್ಥಳದ ನಕ್ಷೆ ತಯಾರು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದೋಸಾ-2 ರವರು ಸ್ಥಳವನ್ನು ಸಹಾಯಕ ಅಭಿಯಂತರರಿಗೆ ತೋರಿಸಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ದೋಸಾ-2 ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯ ಮೋಬೈಲ್ ನ್ನು ನಾನು ವಶಪಡಿಸಿಕೊಂಡಿಲ್ಲ. ಪಿರ್ಯಾದಿಯ ಮೊಬೈಲ್ ನ್ನು ನಾನು ನೋಡಿದ್ದೇನೆ. ಅದನ್ನು ಪಡೆದು ನಾನು ಪರಿಶೀಲಿಸಿದ ಬಗ್ಗೆ ಯಾವುದೇ ದಾಖಲಾತಿಯಲ್ಲಿ ನಮೂದಿಸಿಲ್ಲ. ಪಿರ್ಯಾದಿಯ ಮೊಬೈಲ್ ನ್ನು ನನ್ನ ಸ್ವಾಧೀನಕ್ಕೆ ಪಡೆದು ಪರಿಶೀಲಿಸಿದ್ದೇನೆ ಎಂಬ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಹೌದು. ಪಿರ್ಯಾದಿಯ ಮೊಬೈಲ್ Android ತಂತ್ರಾಂಶ ಇತ್ತಾ ಎಂದು ನಾನು ನೋಡಿರುತ್ತೇನೆ. ಮೊಬೈಲ್ ನ IMEI ಸಂಖ್ಯೆಯನ್ನು ನಾನು ಬರೆದುಕೊಂಡಿಲ್ಲ. ಪಿರ್ಯಾದಿ ಬಳಿ Android Mobile ಅಥವಾ ಧ್ವನಿ ಮುದ್ರಿಸಿಕೋಳ್ಳುವ ಯಾವುದೇ ಉಪಕರಣ ಇರಲಿಲ್ಲ ಎಂದರೆ ಸರಿಯಲ್ಲ. ಧ್ವನಿ ಮುದ್ರಣ ಮಾಡಿಕೊಳ್ಳಲು ಬೇರೆಯವರ ಮೊಬೈಲ್ ಅನ್ನು ಎರವಲು ಪಡೆದುಕೊಂಡಿದ್ದ ಎಂದು ಪಿರ್ಯಾದುದಾರ ನನ್ನ ಮುಂದೆ ಹೇಳಿಲ್ಲ. ಪಿರ್ಯಾದುದಾರ ಪಿರ್ಯಾದನ್ನು ದಿನಾಂಕ 16.09.2013 ರಂದು ಕೊಟ್ಟಿದ್ದಾನೆ ಎಂದರೆ ಹೌದು. ದಿನಾಂಕ 18.01.2014 ರಂದು ಪಿರ್ಯಾದಿ ಸಿಡಿ ಹಾಜರುಪಡಿಸಿದ್ದಾನೆ ಎಂದು ಹೇಳಿದ್ದು ಏಕೆ ಅದನ್ನು ಹಾಜರುಪಡಿಸಲು ತಡ ಆಯಿತು ಎಂದು ನಾನು ಕೇಳಿಲ್ಲ ಆದರೆ ಪಿರ್ಯಾದುದಾರ ಪಿರ್ಯಾದಿನಲ್ಲಿಯೇ ಕಾರಣ ಹೇಳಿದ್ದಾನೆ. ಪಿರ್ಯಾದುದಾರನಿಗೆ ಮುಂದೆ ಸಿಡಿ ಹಾಜರುಪಡಿಸುತ್ತೇನೆ ಎಂದು ಹೇಳಲು ಕಾರಣ ಏನು ಇತ್ತು ಎಂದು ನಾನು ಪಿರ್ಯಾದುದಾರನ್ನು ಕೇಳಿರುವುದಿಲ್ಲ. ಕಾರಣ ಪಿರ್ಯಾದಿನಲ್ಲಿಯೇ ಪಿರ್ಯಾದುದಾರ ತಾನು ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡಿದ್ದೇನೆ ಆನಂತರ ಸಿಡಿ ಮಾಡಿಕೊಡುತ್ತೇನೆ ಎಂದು ಹೇಳಿದ. ಏಕೆ ಪಿರ್ಯಾದನ್ನು ಕೊಟ್ಟ ದಿನವೇ ಸಿಡಿ ಮಾಡಿ ಕೊಡಲಿಲ್ಲ ಎಂದು ನಾನು ಪಿರ್ಯಾದುದಾರನನ್ನು ಕೇಳಲಿಲ್ಲ. ಪಿರ್ಯಾದುದಾರನಿಗೆ ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳುವುದು ಹೇಗೆ ಎಂಬ ಜ್ಞಾನ ಇದೆಯಾ ಎಂದು

ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಪ್ರಾತ್ಯಕ್ಷಿಕೆ ಮಾಡಿ ಆ ಬಗ್ಗೆ ಪರಿಶೀಲನೆ ಮಾಡಿದೆನೆ. ಆ ರೀತಿ ಪ್ರಾತ್ಯಕ್ಷಿಕೆ ಮಾಡಿ ಪರಿಶೀಲಿಸಿದ ಬಗ್ಗೆ ತನಿಖಾ ದಾಖಲಾತಿಗಳಲ್ಲಿ ನಮೂದಿಸಿಲ್ಲ. ನಾನು ದಿನಾಂಕ 15.10.2013 ರ ನಂತರ ಸದರಿ ಪ್ರಾತ್ಯಕ್ಷಿಕೆ ಮಾಡಿ ಪರಿಶೀಲಿಸಿರುತೇನೆ. ನಿರ್ದಿಷ್ಟ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಪಿರ್ಯಾದುದಾರನಿಗೆ ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳುವ ಜ್ಞಾನ ಇದೆಯಾ ಎಂದುಕ ಪ್ರಾತ್ಯಕ್ಷಿಕೆ ಮಾಡಿ ಪರಿಶೀಲಿಸಬೇಕಾಗಿದೆ ಅದಕ್ಕೆ ಪಿರ್ಯಾದುದಾರ ಹಾಜರಾಗಬೇಕು ಎಂದು ನಾನು ಅವನಿಗೆ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ಯಾವುದೇ ವ್ಯಕ್ತಿ ನಮ್ಮ ಕಚೇರಿಗೆ ಬಂದರೆ ಆ ಬಗ್ಗೆ ಠಾಣೆಯ ದಾಖಲೆಗಳಲ್ಲಿ ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದಿಯ ಮೊಬೈಲ್ ಅನ್ನು ಜಪ್ತು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ. ಸಿಡಿಗೆ ಸ್ವತಃ ಪಿರ್ಯಾದುದಾರ ಪರಿವರ್ತನೆ ಮಾಡಿದನಾ ಅಥವಾ ಬೇರೆಯವರಿಂದ ಮಾಡಿಸಿದನಾ ಎಂದು ನಾನು ಕೇಳಿಲ್ಲ. ಮೊಬೈಲ್ ನಿಂದ ಸಿಡಿಗೆ ಪರಿವರ್ತಿಸಿದ ಬಗ್ಗೆ ಕಲಂ 65(ಬಿ) ಪ್ರಮಾಣ ಪತ್ರವನ್ನು ನಾನು ಪಡೆದುಕೊಂಡಿಲ್ಲ. ವಿದ್ಯುನ್ಮಾನ ಉಪಕರಣದಿಂದ ಸೃಜನೆ ಮಾಡಿದ ಸಾಕ್ಷ್ಯ ಪುರಾವೆಯನ್ನು ಹಾಜರುಪಡಿಸಿದಾಗ ಕಲಂ 65(ಬಿ) ಪ್ರಮಾಣ ಪತ್ರ ಪಡೆಯಬೇಕಾಗಿರುತ್ತದೆ ಎಂದರೆ ಎಲ್ಲಾ ಸಂಧರ್ಬದಲ್ಲಿ ಅದು ಅನ್ವಯ ಆಗುವುದಿಲ್ಲ. ಈ ಪ್ರಕರಣದ ಸಂಂದರ್ಭದಲ್ಲಿ ಅದು ಅನ್ವಯ ಆಗುವುದಿಲ್ಲ. ಈ ಪ್ರಕರಣದಲ್ಲಿ ಅದರ ಅವಶ್ಯಕತೆ ಇರಲಿಲ್ಲ. ಪಿರ್ಯಾದುದಾರ ಯಾವುದೇ ಸಿಡಿ ನನ್ನ ಮುಂದೆ ಹಾಜರುಪಡಿಸದೇ ಇರುವುದರಿದ ನಾನು ಕಲಂ 65(ಬಿ) ಪ್ರಮಾಣ ಪತ್ರ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯ ಮೊಬೈಲ್ ಮಾಲಕತ್ವದ ಬಗ್ಗೆ ನಾನು ಖರೀದಿ ದಾಖಲಾತಿ ಪಡೆದಿಲ್ಲ ಆದರೆ ಗ್ರಾಹಕರ ಅರ್ಜಿ ನಮೂನೆ (CAF) ಅನ್ನು ಸಂಬಂಧಪಟ್ಟ ಟೆಲಿಕಾಂ ಇಲಾಖೆಯಿಂದ ಪಡೆದಿದ್ದೇನೆ. ಪಿರ್ಯಾದುದಾನಿಗೆ ಮತ್ತೊಬ್ಬರ ಧ್ವನಿ ಮುದ್ರಣ ಮಾಡಿಕೊಳ್ಳಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರ ಮೊಬೈಲ್ ನಲ್ಲಿ ಕರೆ ಮಾಡಿ ಆರೋಪಿ ಜೊತೆ ಆದ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿರುತ್ತಾನೆ. ಖುದ್ದಾಗಿ ಆರೋಪಿ ಸಮಕ್ಷಮದಲ್ಲಿ ಮಾತನಾಡುವಾಗ ಅದನ್ನು ಧ್ವನಿ ಮುದ್ರಣ ಮಾಡಿಕೊಂಡಿಲ್ಲ. ಅಂದರೆ ದೂರದಿಂದ ದೂರವಾಣಿ ಕರೆ ಮಾಡಿ ಸಂಭಾಷಣೆಯ ಧ್ವನಿ ಮುದ್ರಣ ಮಾಡಿಕೊಂಡಿದ್ದಾನೆ. ಈ ಬಗ್ಗೆ ಕರೆ ವಿವರ ದಾಖಲಾತಿ ಸಹ ಹಾಜರುಪಡಿಸಲಾಗಿದೆ. ಪಿರ್ಯಾದುದಾರ ಯಾವ ದಿನಾಂಕದಂದು ಯಾವ ಸ್ಥಳದಲ್ಲಿ ಸಿಡಿಗೆ ಪರಿವರ್ತನೆ ಮಾಡಿದ್ದ ಎಂದು ಗೊತ್ತಿಲ್ಲ. ಮೊಬೈಲ್ ನಿಂದ ಸಿಡಿಗೆ ವರ್ಗಾಯಿಸಲು ಬೇಕಾದ ಉಪಕರಣ ಪಿರ್ಯಾದಿ ಬಳಿ ಇರಲಿಲ್ಲ ಎಂದರೆ ಅವನು

ಎಲ್ಲಿ ಅದನ್ನು ಮಾಡಿದ್ದಾನೆ ಎಂದು ಗೊತ್ತಿಲ್ಲ. ಪಿರ್ಯಾದಿ ಮತ್ತು ಆರೋಪಿಯ ನಡುವೆ ಮೊಬೈಲ್ ನಲ್ಲಿ ಯಾವುದೇ ಸಂಭಾಷಣೆ ಆಗಿಲ್ಲ ಎಂದರೆ ಸರಿಯಲ್ಲ. ನಂತರ ಪ್ರಕರಣಕ್ಕೆ ಅನುಕೂಲ ಆಗಲಿ ಎಂದು ತಡವಾಗಿ ಸಿಡಿಯನ್ನು ಪಿರ್ಯಾದುದಾರ ಸೃಷ್ಟಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಸಿಡಿಯಲ್ಲಿರುವ ಧ್ವನಿ ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ.

7. ಆರೋಪಿ ವಿರುದ್ಧ ಇಲಾಖಾ ವಿಚಾರಣೆ ಆಗಿದೆ ಎಂದರೆ ಹೌದು. ಯಾವುದೇ ವಿಧ್ಯುನ್ಮಾನ ದಾಖಲಾತಿಯನ್ನು ಇದೇ ರೀತಿ ಸಂರಕ್ಷಿಸಬೇಕು ಮತ್ತು ರವಾನೆ ಮಾಡಬೇಕು ಎಂಬ ಬಗ್ಗೆ ನಿಯಮ ಇದೆ ಎಂದರೆ ಹೌದು. ನನಗೆ ಸಿಡಿ ನೀಡಿದ ಮೇಲೆ ನಾನು ಅದನ್ನು ನನ್ನ ಕಪಾಟಿನಲ್ಲಿ ನ್ಯಾಯಾಲಯದ ಅನುಮತಿ ಪಡೆದ ನಂತರ ಇಟ್ಟಿದ್ದೆ. ಕಪಾಟಿನಲ್ಲಿ ಇಟ್ಟಿದ್ದ ಬಗ್ಗೆ ಯಾವುದೇ ವಹಿಯಲ್ಲಿ ನಾನು ನಮೂದಿಸಿಲ್ಲ, ಭದ್ರತಾ ಕಪಾಟಿನಲ್ಲಿ ಅದನ್ನು ಇಟ್ಟಿದ್ದೆ. ಅದು ಆರಕ್ಷಕ ಅಧೀಕ್ಷಕರ ತಾಬಾದಲ್ಲಿ ಇರುತ್ತದೆ. ನಾನು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ರಾಕೇಶ್ವರ ಕೃಷ್ಣ ಪಟಗಾರ ಎನ್ನುವವರು ಆರೋಪಿ ಮತ್ತು ಪಿರ್ಯಾದಿಯ ಸಂಭಾಷಣೆ ಇದೆ ಎಂದು ಹೇಳಲಾದ ಧ್ವನಿ ಸುರುಳಿಯಲ್ಲಿ ಆರೋಪಿಯ ಧ್ವನಿಯನ್ನು ಗುರುತಿಸಿದ್ದಾನೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

8. ಧಾರವಾಡ ಸಹಕಾರಿ ಹಾಲು ಒಕ್ಕೂಟಡ ಕಾರ್ಯನಿರ್ವಾಹಕ ನಿರ್ದೇಶಕರು ಶಿಕ್ಷಣಾಧಿಕಾರಿ ಅಕ್ಷರ ದೋಸಾಹ ಕಾರ್ಯಕ್ರಮ ಜಿಲ್ಲಾ ಪಂಚಾಯತ ಕಾರವಾರರವರಿಗೆ ದಿನಾಂಕ 23.09.2013 ರಂದು ಪತ್ರದ ಮೂಲಕ ಹಾಲಿನ ಪುಡಿಯನ್ನು ಅಧೀಕೃತವಾಗಿ ಸಾಗಾಟ ಮಾಡುವುದು ಯಾರು ಎಂದು ಪತ್ರ ಬರೆದಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ನಾನು ಹೇಳಿದ ಸಾಕ್ಷ್ಯ ಈಗ ನನಗೆ ತೋರಿಸಿದ ನೋಟರಿಕೃತ ಸಾಕ್ಷ್ಯದ ನಕಲು ಆಗಿದೆ ಎಂದರೆ ಹೌದು. ಅದನ್ನು ನಿಡಿ–30 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಇಲಾಖಾ ವಿಚಾರಣೆಯಲ್ಲಿ ನನ್ನನ್ನು ವಿಚಾರಣೆ ಮಾಡುವಾಗ ಮೇಲೆ ಹೇಳಿದ ಪತ್ರವನ್ನು ನನಗೆ ತೋರಿಸಿದರು ಮತ್ತು ಅದನ್ನು ನಾನು ಆಗ ಒಪ್ಪಿಕೊಂಡೆ. ನಂತರ ನಾನು ಧಾರವಾಡ ಸಹಕಾರಿ ಹಾಲು ಒಕ್ಕೂಟಡ ಕಾರ್ಯನಿರ್ವಾಹಕ ನಿರ್ದೇಶಕರವರಿಗೆ ಆ ಪತ್ರದ ಪ್ರತಿಯನ್ನು ಕೊಡುವಂತೆ ಪತ್ರ ಬರೆದಿದ್ದೆ ಮತ್ತು ಅವರು ದಿನಾಂಕ 13.05.2014 ರಂದು ಅದರ ಪ್ರತಿಯನ್ನು ನನಗೆ ಕಳುಹಿಸಿರುತ್ತಾರೆ

ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ.(ಆರೋಪಿಪರ ವಕೀಲರು ಸಾಕ್ಷಿಯ ಸದರಿ ಹೇಳಿಕೆ ಸಮಂಜಸ ಆಗಿದೆ ಮತ್ತು ನ್ಯಾಯಾಲಯದ ಸಮಯ ಹರಣ ಆಗುತ್ತದೆ ಎಂದು ತಕರಾರು ಮಾಡಿರುತ್ತಾರೆ.) ನಿಡಿ-30 ರಲ್ಲಿ ನನ್ನ ಸಾಕ್ಷ್ಯದಲ್ಲಿ ನಾನು ದಿನಾಂಕ 21/23.09.2013 ರಂದು ಪತ್ರದ ಮೂಲಕ ತಿಳಿಸಿರುತ್ತಾರೆ ಎನ್ನುವುದು ಸರಿ ಎಂದು ಹೇಳಿದ್ದೇನೆ ಎಂದರೆ ಹೌದು. ಕಾರಣ ಆಗ ಆ ಪತ್ರವನ್ನು ವಿಚಾರಣಾಧಿಕಾರಿಯವರು ಆ ಸಮಯದಲ್ಲಿ ನನಗೆ ತೋರಿಸಿದರು. ಆದ್ದರಿಂದ ನಾನು ಸರಿ ಎಂದು ಹೇಳಿದೆ. ಈಗ ತೋರಿಸಿದ ನಿಡಿ-11 ರಲ್ಲಿ ದಿನಾಂಕ 23.09.2013 ಯೋಜನೆ ಅಡಿಯಲ್ಲಿ ನಂದಿನ ಹಾಲಿನ ಪುಡಿಯ ಸರಬರಾಜು ಸಾರಿಗೆ ಗುತ್ತಿಗೆದಾರರನ್ನು ನಿಯೋಜಿಸುವ ಬಗ್ಗೆ ಎಂದು ಕ್ರಮ ಸಂಖ್ಯೆ 3092 ರಲ್ಲಿ ನಮೂದಿಸಲಾಗಿದೆ ಎಂದರೆ ಹೌದು. ಅದು ನಿಡಿ-11 ರ ಅಡಕದಲ್ಲಿ ಇರುತ್ತದೆ. ದಿನಾಂಕ 16.09.2013 ವರೆಗೆ ಹಾಲಿನ ಪುಡಿಯನ್ನು ಸರಬರಾಜು ಮಾಡಿಲ್ಲ ಎಂದು ನನ್ನ ತನಿಖೆಯಲ್ಲಿ ತಿಳಿದುಬಂದಿದೆ ಎಂದರೆ ಆಗ ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿ ಆಗಿರಲಿಲ್ಲ. ಆದರೆ ನಂತರ ನಾನು ಧಾರವಾಡದ ಸಹಕಾರಿ ಹಾಲು ಒಕ್ಕೂಟಡ ಕಾರ್ಯನಿರ್ವಾಹಕ ನಿರ್ದೇಶಕರವರಿಗೆ ಪತ್ರ ಬರೆದಾಗ ಅವರು ತಾತ್ಕಾಲಿಕ ಗುತ್ತಿಗೆ ಆದೇಶದ ಪ್ರತಿಯನ್ನು ನನಗೆ ಕಳುಹಿಸಿರುತ್ತಾರೆ. ನಾನು ದಿನಾಂಕ 15.10.2013 ರಂದು ಪ್ರಭಾರ ವಹಿಸಿಕೊಂಡಿರುತ್ತೇನೆ. ನಿಡಿ-30 ರಲ್ಲಿ ನಾನು ದಿನಾಂಕ 07.10.2013 ರಿಂದ 26.11.2014 ರವರೆಗೆ ಕಾರವಾರ ಲೋಕಾಯುಕ್ತ ಕಚೇರಿಯಲ್ಲಿ ಆರಕ್ಷಕ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ಹೇಳಿದ್ದೇನೆ ಎಂದರೆ ಹೌದು. ದಿನಾಂಕ 07.10.2013 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡೆ ದಿನಾಂಕ 15.10.2013 ರಂದು ಹಿಂದಿನ ಆರಕ್ಷಕ ಉಪಾಧೀಕ್ಷಕರಾದ ಶಿವಳ್ಳಿ ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡೆ. ನಾನು ಯಾವುದೇ ಕಾಗದ ಪತ್ರ ಕೋರಿ ಪತ್ರ ಬರೆದಿಲ್ಲ ಮತ್ತು ಯಾವುದೇ ವಿದ್ಯುನ್ಮಾನ ದಾಖಲಾತಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

9. ಅಭಿಯೋಜನಾ ಮಂಜೂರಾತಿ ಕೋರಿ ಯಾವ ಅಧಿಕಾರಿಗೆ ಪತ್ರ ಬರೆಯಬೇಕು ಎಂದು ಲೋಕಾಯುಕ್ತ ಇಲಾಖೆಯ ಮೇಲಾಧಿಕಾರಿಯವರಿಗೆ ಪತ್ರ ಬರೆದಿದ್ದೇನೆ ಎಂದರೆ ನಾನು ಎ ಡಿ ಜಿ ಪಿ ರವರಿಗೇ ಪತ್ರ ಬರೆದು ಧಾರವಾಡದ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಂದ ಅಭಿಯೋಜನಾ ಮಂಜೂರಾತಿ ಕೊಡಿಸಬೇಕು ಎಂದು ಕೋರಿದೆ.

ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರು ಅಭಿಯೋಜನಾ ಮಂಜೂರಾತಿ ನೀಡಲು ಸಕ್ಷಮ ಅಧಿಕಾರಿ ಎಂದು ನಾನು ಖಚಿತ ಮಾಡಿಕೊಂಡಿರಲಿಲ್ಲ ಅದನ್ನು ಬೆಂಗಳೂರಿನ ಲೋಕಾಯುಕ್ತ ಅಪರ ಪೊಲೀಸ ಮಹಾನಿರ್ದೇಶಕರ ಕಚೇರಿಯಿಂದ ಖಚಿತಪಡಿಸಿಕೊಳ್ಳುತ್ತಾರೆ. ಧಾರವಾಡ ಸಹಕಾರಿ ಹಾಲು ಒಕ್ಕೂಟಡ ಕಾರ್ಯನಿರ್ವಾಹಕ ನಿರ್ದೇಶಕರವರಿಂದ ಯಾವುದೇ ತಾತ್ಕಾಲಿಕ ಗುತ್ತಿಗೆ ಆದೇಶ ಪ್ರತಿ ಪಡೆದಿಲ್ಲ ಎಂದರೆ ಸರಿಯಲ್ಲ. ವಿದ್ಯುನ್ಮಾನ ಸಾಕ್ಷ್ಯವನ್ನು ಪಡೆಯಲು ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದಿದೆನಾ ಎಂದರೆ ನಾನು ಯಾವುದೇ ವಿದ್ಯುನ್ಮಾನ ದಾಖಲಾತಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಲ್ಲ. ಆದರೆ ಸಿಡಿ ಸಂಗ್ರಹಿಸಿರುತ್ತೇನೆ. ಅದನ್ನು ನಾನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಲ್ಲ. ವಿದ್ಯುನ್ಮಾನ ಸಾಕ್ಷ್ಯಕ್ಕೆ ಸಂಬಂಧಿಸಿದ ಕಾನೂನನ್ನು ಸಂಪೂರ್ಣವಾಗಿ ನಾನು ಉಲ್ಲಂಘನೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾನೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಧ್ವನಿ ಸುರುಳಿಯಲ್ಲಿರುವ ಧ್ವನಿ ಅಸ್ಪಷ್ಟವಾಗಿ ಮತ್ತು ಅದು ಯಾರದ್ದು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೇ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ವಿ.ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ